

ಕಲಾವಿದ್ಯಾರ್ಥಿಗಳಿಗೆ ಸೊಗಸಾದ ಪಠ್ಯಗಳು.

ಹಲವು ತಲೆಮಾರುಗಳ ಮಕ್ಕಳಿಗೆ ಆಚಾರ್ಯರು 'ಎಂಟಿವಿ ಮಾಮ.' ಮಕ್ಕಳ ಕಥೆಗಳ 'ಚಂದಮಾಮ' ನಿಯತಕಾಲಿಕೆ ಎಳೆಯರಿಗೂ ಹಿರಿಯರಿಗೂ ಇಷ್ಟವಾಗುವಲ್ಲಿ ಆಚಾರ್ಯರ ಕೈಚಳಕದ ಕೊಡುಗೆ ದೊಡ್ಡದಿತ್ತು. ಕನ್ನಡವೂ ಸೇರಿದಂತೆ ವಿವಿಧ ಭಾಷೆಗಳ ನಿಯತಕಾಲಿಕೆಗಳು ಎಂಟಿವಿ ಅವರ ಕಲಾಕೃತಿಗಳ ಮೂಲಕ ತಮ್ಮ ಚೆಲುವು ಹೆಚ್ಚಿಸಿಕೊಂಡಿವೆ.

ಸಾಂಪ್ರದಾಯಿಕ ಶೈಲಿಯ ಚಿತ್ರಕಲೆಯ ಬಹುತೇಕ ಮುಖ್ಯ ಕಲಾವಿದರ ಕಲೆ ರಾಜಾಶ್ರಯದಲ್ಲಿ ಅರಳಿರುವುದೇ ಹೆಚ್ಚು. ಇದಕ್ಕೆ ಅಪವಾದವಾಗಿ, ಕೆಲವು ಕಲಾವಿದರು ಜನಾಶ್ರಯದಲ್ಲಿ ತಮ್ಮ ಅಭಿವ್ಯಕ್ತಿಯನ್ನು ಕಂಡುಕೊಂಡಿರುವ ಉದಾಹರಣೆಗಳೂ ಇವೆ. ಆಚಾರ್ಯರ ಕಲೆ ಅರಳಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ– ಪತ್ರಿಕೆಗಳ ಮೂಲಕ. ಪತ್ರಿಕಾಮಾಧ್ಯಮಗಳ ಮೂಲಕ ಅಭಿವ್ಯಕ್ತಿಯನ್ನು ಕಂಡುಕೊಂಡು, ಪತ್ರಿಕೆಗಳನ್ನೂ ಮೀರಿ ಕಲಾಕ್ಷೇತ್ರದಲ್ಲಿ ಅಚ್ಚಳಿಯದೆ ಉಳಿದಿರುವ ವಿರಳ ಕಲಾವಿದರಲ್ಲಿ ಎಂಟಿವಿ ಆಚಾರ್ಯರೂ ಒಬ್ಬರು.

ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡ ಎಂಟಿವಿ ಆಚಾರ್ಯರ ಅಪೂರ್ವ ಕಲಾಕೃತಿಗಳ ಈ ಸಂಕಲನ, ಕಲಾವಿದರ ಮೇರುಪ್ರತಿಭೆಯನ್ನು ಕಾಣಿಸುವುದರ ಜೊತೆಗೆ, ಒಂದು ಕಾಲದಲ್ಲಿ ನಿಯತಕಾಲಿಕೆಗಳು– ಕನ್ನಡದ ನಿಯತಕಾಲಿಕೆಗಳು– ಗುಣಮಟ್ಟದ ಕಲೆಯೊಂದಿಗೆ ಹೊಂದಿದ್ದ ಸಂಬಂಧವನ್ನು ನೆನಪಿಸುವಂತಿದೆ. ನಿಯತಕಾಲಿಕೆಗಳ ಮೂಲಕ ಸಹೃದಯರು ಸಾಹಿತ್ಯದ ಅಭಿರುಚಿ ಹೊಂದುವುದರೊಂದಿಗೆ ಕಲೆಯ ಸಾಧ್ಯತೆಗಳನ್ನೂ ಪರಿಚಯಿಸಿಕೊಳ್ಳುತ್ತಿದ್ದರು.

ಕರ್ನಾಟಕದ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಎಂಟಿವಿ ಅವರಿಗೆ ಸಲ್ಲುವ ಮೂಲಕ ತನ್ನ ಗೌರವ ಹೆಚ್ಚಿಸಿಕೊಂಡಿವೆ. ಈಗ, ಹೊಸ ತಲೆಮಾರಿಗೆ ಆಚಾರ್ಯರ ಪ್ರತಿಭಾವಿಲಾಸವನ್ನು ಪರಿಚಯಿಸುವ ರೂಪದಲ್ಲಿ 'ಪ್ರಿಸಂ ಬುಕ್ಸ್' ಪ್ರಕಟಿಸಿರುವ ಈ ಕೃತಿ, ಎಂಟಿವಿ ಅವರಿಗೆ ಮರಣೋತ್ತರವಾಗಿ ಸಂದಿರುವ ಬಹು ದೊಡ್ಡ ಗೌರವವಾಗಿದೆ. ●